ಅ) ರಾಜ್ಯದಲ್ಲಿನ ರೈತರಿಗೆ ಸಹಕಾರ ಸಂಸ್ಥೆಗಳ ಮತ್ತು ವಾಣಿಜ್ಯ ಬ್ಯಾಂಕುಗಳ ಮೂಲಕ ನೀಡಲಾದ ವಿವಿಧ ಸಾಲಗಳ ಮೊತ್ತವೆಷ್ಟು? (ವಲಯವಾರು ಅಂಕ ಅಂಶ ನೀಡುವುದು)

ಆ) ವಸೂಲು ಮಾಡಬೇಕಾಗಿರುವ ಮೊತ್ತ (ವಲಯವಾರು ಮೊತ್ತ ಕೊಡುವುದು)?

ಇ) ಈ ಸಾಲಗಳನ್ನು ಮನ್ನಾ ಮಾಡಲು ಸರಕಾರ ಯೋಜಿಸುತ್ತಿದೆಯೇ?

ಈ) ಸರ್ಕಾರ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಒಂದು ಸಮಯದ ರಿಯಾಯಿತಿ ಎಂದು ಮನ್ನಾ ಮಾಡಲು ಆಲೋಚಿಸುತ್ತಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ರೂಪಾಯಿ ಕೋಟಿಗಳಲ್ಲಿ

| | |
|---|---|
| ಸಹಕಾರಿ ಕ್ಷೇತ್ರದಲ್ಲಿ | 1340.97 |
| ವಾಣಿಜ್ಯ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳು | 3471.87 |

ಆ) ಸಹಕಾರಿ ಕ್ಷೇತ್ರದಲ್ಲಿ 292.01
ವಾಣಿಜ್ಯ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳು 1205.71

ಇ) ಇಲ್ಲ.

ಈ) ಇಲ್ಲ.

**ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಮಳೆಯಿಂದಾಗಿ ರೈತರು ಬೆಳೆದ ಬೆಳೆಗಳಿಗೆ ಹಾನಿ**

595 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಇತ್ತೀಚಿನ ಮಳೆಯಿಂದಾಗಿ ಕಳ್ಳಂಬೆಳ್ಳ ಕ್ಷೇತ್ರದಲ್ಲಿ ರೈತರು ಬೆಳೆದ ಬೆಳೆಗಳು ಮತ್ತು ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ರೈತರ ಬೆಳೆಯಿಂದ ಮತ್ತು ರಸ್ತೆಗಳ ಹಾನಿಯಿಂದಾಗಿರುವ ನಷ್ಟವೆಷ್ಟು?

ಇ) ಇಲ್ಲಿಯವರೆಗೂ ಕ್ಷೇತ್ರಕ್ಕೆ ಪ್ರವಾಹ ಹಾನಿಯಲ್ಲಿ ಬಿಡುಗಡೆಯಾದ ಹಣವೆಷ್ಟು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಹೌದು

ಆ) ಬೆಳೆಗಳಿಗಾಗಿರುವ ಹಾನಿ ರೂ. 250.00 ಲಕ್ಷಗಳು
ರಸ್ತೆಗಳಿಗೆ ಆಗಿರುವ ಹಾನಿ ರೂ. 38.00 ಲಕ್ಷಗಳು
**ರೂ. 288.00 ಲಕ್ಷಗಳು**

**ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಆರಾಧನಾ ಯೋಜನೆಯಡಿಯಲ್ಲಿ ಬಿಡುಗಡೆ ಆದ ಹಣ**

705 - ಶ್ರೀ ಆಂಜನಮೂರ್ತಿ (ನೆಲಮಂಗಲ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಆರಾಧನಾ ಯೋಜನೆಯಡಿಯಲ್ಲಿ ಇದುವರೆಗೂ ಸರ್ಕಾರವು ಬಿಡುಗಡೆ ಮಾಡಿದ ಹಣವಷ್ಟು?